**All India Radio: Bangalore**
**National Bulletin In Kannada**
**23.02.2025  19.35 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**<><><><>**

ಮುಖ್ಯಾಂಶಗಳು

1. ಮುಂದಿನ ಮೂರು ವರ್ಷಗಳಲ್ಲಿ ಪ್ರತಿ ಜಿಲ್ಲೆಯಲ್ಲಿ 'ಕ್ಯಾನ್ಸರ್ ಡೇ ಕೇರ್' ಆರಂಭಿಸಲು ಕೇಂದ್ರದ ನಿರ್ಧಾರ
2. ಕೃತಕ ಬುದ್ಧಿಮತ್ತೆ ವಲಯದಲ್ಲಿ ಭಾರತದ ಕ್ಷಿಪ್ರ ಪ್ರಗತಿ - ಮನ್ ಕಿ ಬಾತ್‌ನಲ್ಲಿ ಪ್ರಧಾನಮಂತ್ರಿ
3. ಮಹಿಳಾ ಶಾಂತಿ ಪಾಲಕರ ಪ್ರಪ್ರಥಮ ಸಮಾವೇಶ ನವದೆಹಲಿಯಲ್ಲಿ ನಾಳೆ ಆರಂಭ
4. ಐಸಿಸಿ ಪುರುಷರ ಚಾಂಪಿಯನ್ ಟ್ರೋಫಿ ಕ್ರಿಕೆಟ್ : ಭಾರತಕ್ಕೆ ೨೪೨ ರನ್‌ಗಳ ಗುರಿ ನೀಡಿದ ಪಾಕಿಸ್ತಾನ

<><><><>

ಕ್ಯಾನ್ಸರ್ ಔಷಧಗಳ ಬೆಲೆಯನ್ನು ಕಡಿಮೆ ಮಾಡಲಾಗಿದ್ದು, ಮುಂದಿನ ಮೂರು ವರ್ಷಗಳಲ್ಲಿ ಪ್ರತಿ ಜಿಲ್ಲೆಯಲ್ಲಿ 'ಕ್ಯಾನ್ಸ್‌ರ್ ಡೇ ಕೇರ್' ಕೇಂದ್ರಗಳನ್ನು ತೆರೆಯಲಾಗುವುದು ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಘೋಷಿಸಿದ್ದಾರೆ. ಮಧ್ಯಪ್ರದೇಶದ ಛತ್ತಾರ್‌ಪುರ್ ಜಿಲ್ಲೆಯಲ್ಲಿಂದು ಬಗೇಶ್ವರ ಧಾಮ ವೈದ್ಯಕೀಯ ಮತ್ತು ವಿಜ್ಞಾನ ಸಂಶೋಧನಾ ಸಂಸ್ಥೆಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಎಲ್ಲರಿಗೂ ಆರೋಗ್ಯ ತಮ್ಮ ಸರ್ಕಾರದ ಆದ್ಯತೆಯಾಗಿದ್ದು, ಜಿಲ್ಲಾಸ್ಪತ್ರೆಗಳಲ್ಲಿ ಕ್ಯಾನ್ಸ್‌ರ್ ಕ್ಲಿನಿಕ್‌ಗಳನ್ನು ತೆರೆಯಲಾಗುವುದು ಎಂದರು. ಜನರು ಸರ್ಕಾರದ ಯೋಜನೆಗಳಾದ ಆಯುಷ್ಮಾನ್ ಭಾರತ್ ಮತ್ತು ಜನೌಷಧಿ ಕೇಂದ್ರಗಳ ಸದುಪಯೋಗ ಪಡೆದುಕೊಳ್ಳಬೇಕೆಂದು ಅವರು ಕರೆ ನೀಡಿದ್ದಾರೆ.

**ಧ್ವನಿ : ನರೇಂದ್ರ ಮೋದಿ (೧೮ ಸೆಕೆಂಡ್ಸ್)**

ನಮ್ಮ ದೇವಾಲಯಗಳು ಕೇವಲ ಪೂಜಾ ತಾಣಗಳಲ್ಲ, ಅದು ವೈಜ್ಞಾನಿಕ ಮತ್ತು ಸಾಮಾಜಿಕ ಜಾಗೃತಿಯ ಕೇಂದ್ರಗಳಾಗಿವೆ. ನಮ್ಮ ಋಷಿಮುನಿಗಳು ನಮಗೆ ಆಯುರ್ವೇದ ಮತ್ತು ಯೋಗ ವಿಜ್ಞಾನವನ್ನು ನೀಡಿದ್ದು, ಇದನ್ನು ವಿಶ್ವಾದ್ಯಂತ ಅಳವಡಿಸಿಕೊಳ್ಳಲಾಗುತ್ತಿದೆ ಎಂದು ಅವರು ಹೇಳಿದರು. ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯಪ್ರದೇಶ, ಬಿಹಾರ ಮತ್ತು ಅಸ್ಸಾಂ ರಾಜ್ಯಗಳಿಗೆ ಮೂರು ದಿನಗಳ ಭೇಟಿ ಕೈಗೊಂಡಿದ್ದು, ಇಂದು ಮಧ್ಯಪ್ರದೇಶದ ಛತಾರ್‌ಪುರ್ ತಲುಪಿದ್ದಾರೆ.

<><><><>

ಕೃತಕ ಬುದ್ಧಿಮತ್ತೆ - ಎಐ ವಲಯದಲ್ಲಿ ಭಾರತ ಕ್ಷಿಪ್ರವಾಗಿ ಸದೃಢವಾಗಿ ಹೊರಹೊಮ್ಮುತ್ತಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ಆಕಾಶವಾಣಿಯ ಮಾಸಿಕ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿಂದು ಮಾತನಾಡಿದ ಅವರು, ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವಲ್ಲಿ ಭಾರತ ಯಾವುದೇ ರಾಷ್ಟ್ರಕ್ಕಿಂತ ಹಿಂದುಳಿದಿಲ್ಲ. ಇತ್ತೀಚೆಗೆ ಪ್ಯಾರಿಸ್‌ನಲ್ಲಿ ನಡೆದ ಎಐ ಕ್ರಿಯಾ ಶೃಂಗಸಭೆಯಲ್ಲಿ ಇಡೀ ವಿಶ್ವ ಈ ವಲಯದಲ್ಲಿ ಭಾರತದ ಪ್ರಗತಿಯನ್ನು ಕೊಂಡಾಡಿವೆ ಎಂದರು. ಯುವ ಸಮೂಹ ಹೆಚ್ಚಾಗಿ ನವೀನ ತಂತ್ರಜ್ಞಾನಗಳನ್ನು ಬಳಸುತ್ತಿದ್ದು, ಇದು ಬಾಹ್ಯಾಕಾಶ ವಲಯದಲ್ಲೂ ಸಾಧನೆಗೆ ಪೂರಕವಾಗಿದೆ. ಇತ್ತೀಚೆಗೆ ಇಸ್ರೋದ ೧೦೦ನೇ ಕ್ಷಿಪಣಿ ಉಡಾವಣೆಗೆ ದೇಶ ಸಾಕ್ಷಿಯಾಗಿದ್ದು, ಇತರ ದೇಶಗಳ ಉಪಗ್ರಹಗಳೂ ಸೇರಿದಂತೆ ಕಳೆದ ೧೦ ವರ್ಷಗಳಲ್ಲಿ ೪೬೦ ಉಪಗ್ರಹಗಳನ್ನು ಉಡಾವಣೆ ಮಾಡಿದೆ ಎಂದು ಅವರು ವಿವರಿಸಿದರು. ಈ ತಿಂಗಳ ೨೮ ರಂದು ರಾಷ್ಟ್ರೀಯ ವಿಜ್ಞಾನ ದಿನದ ಹಿನ್ನೆಲೆಯಲ್ಲಿ ಸಂಶೋಧನಾ ಪ್ರಯೋಗಾಲಯ, ತಾರಾಲಯ ಅಥವಾ ಬಾಹ್ಯಾಕಾಶ ಕೇಂದ್ರಕ್ಕೆ ಕೇಳುಗರು ಭೇಟಿ ನೀಡಿ, ಒಂದು ದಿನ ವಿಜ್ಞಾನಿಯಾಗುವ ಅನುಭವ ಪಡೆಯುವಂತೆ ಕರೆ ನೀಡಿದರು. ಮಾರ್ಚ್ ೮ ರಂದು ಮಹಿಳಾ ದಿನಾಚರಣೆ ಹಿನ್ನೆಲೆಯಲ್ಲಿ ನಾರಿ ಶಕ್ತಿಗೆ ಗೌರವ ಸೂಚಕವಾಗಿ ಅಂದು ಒಂದು ದಿನ ದೇಶದ ಆಯ್ದ ಪ್ರೇರಣದಾಯಕ ಮಹಿಳೆಯರಿಗೆ ತಮ್ಮ ಸಾಮಾಜಿಕ ಜಾಲತಾಣಗಳ ನಿರ್ವಹಣೆಯ ಉಸ್ತುವಾರಿಯನ್ನು ನೀಡಲಾಗುವುದು ಎಂದು ಪ್ರಧಾನಿ ಹೇಳಿದರು. ಅಂದು ಮಹಿಳೆಯರು ಪ್ರಧಾನಿಯವರ ಸಾಮಾಜಿಕ ಮಾಧ್ಯಮ ಖಾತೆಗಳ ಮೂಲಕ ತಮ್ಮ ಅನುಭವಗಳನ್ನು ಹಂಚಿಕೊಳ್ಳಲಿದ್ದು, ಇದರ ಭಾಗವಾಗಲು ಬಯಸುವವರು ನಮೋ ಆಪ್‌ನಲ್ಲಿರುವ ವಿಶೇಷ ವೇದಿಕೆ ಮೂಲಕ ಪಾಲ್ಗೊಂಡು ತಮ್ಮ ಸಂದೇಶವನ್ನು ಮಹಿಳಾ ದಿನದಂದು ವಿಶ್ವದೊಂದಿಗೆ ಹಂಚಿಕೊಳ್ಳುವ ಅವಕಾಶ ಪಡೆಯಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

**ಧ್ವನಿ : ಪ್ರಧಾನಿ ನರೇಂದ್ರ ಮೋದಿ (೨೧ ಸೆಕೆಂಡ್‌ಗಳು)**

ಉತ್ತರಾಖಂಡದಲ್ಲಿ ನಡೆದ ನ್ಯಾಷನಲ್ ಗೇಮ್ಸ್‌ನಲ್ಲಿ ದೇಶಾದ್ಯಂತದ ೧೧ ಸಾವಿರಕ್ಕೂ ಹೆಚ್ಚು ಕ್ರೀಡಾಪಟುಗಳು ಪಾಲ್ಗೊಂಡಿದ್ದು, ಈ ರಾಜ್ಯ ದೇಶದ ಕ್ರೀಡಾತಾಣವಾಗಿ ಹೊರಹೊಮ್ಮಲಿದೆ ಎಂದು ಅವರು ಅಭಿಪ್ರಾಯಪಟ್ಟರು. ಆರೋಗ್ಯದ ಬಗ್ಗೆ ಮಾತನಾಡಿದ ಪ್ರಧಾನಿ, ಬೊಜ್ಜು ಇತ್ತೀಚಿನ ದಿನಗಳಲ್ಲಿ ಆಡುತ್ತಿರುವ ಪ್ರಮುಖ ಸಮಸ್ಯೆಯಾಗಿದ್ದು, ಸದೃಢ ಮತ್ತು ಆರೋಗ್ಯಕರ ರಾಷ್ಟ್ರಕ್ಕಾಗಿ ಈ ಸಮಸ್ಯೆ ನಿವಾರಣೆ ಅತ್ಯಗತ್ಯ. ಸ್ಥೂಲಕಾಯದಿಂದಾಗಿ ಅನೇಕ ಕಾಯಿಲೆಗಳು ಉಂಟಾಗುತ್ತಿದ್ದು, ಖಾದ್ಯತೈಲ ಬಳಕೆಯನ್ನು ಪ್ರತಿತಿಂಗಳು ಕನಿಷ್ಠ ಶೇಕಡ ೧೦ ರಷ್ಟು ತಗ್ಗಿಸಿದಲ್ಲಿ ಆರೋಗ್ಯ ಕಾಯ್ದುಕೊಳ್ಳಬಹುದಾಗಿದೆ ಎಂದು ಅವರು ಹೇಳಿದರು. ಆರೋಗ್ಯದ ಬಗ್ಗೆ ಇಂದಿನ ಮನದ ಮಾತು

ಸಂಚಿಕೆಯಲ್ಲಿ ಕ್ರೀಡಾಪಟುಗಳಾದ ನೀರಜ್ ಚೋಪ್ರಾ ಮತ್ತು ನಿಖಾತ್ ಝರೀನ್, ವೈದ್ಯರಾದ ದೇವಿ ಶೆಟ್ಟಿ ಮಾತನಾಡಿದ್ದಾರೆ.ಕರ್ನಾಟಕದ ಹುಲಿ ವೇಷ, ತಮಿಳುನಾಡಿನ ಪುಲಿ ಮತ್ತು ಕೇರಳದ ಪುಲಿಕಲಿ ಸಾಂಸ್ಕೃತಿಕ ನೃತ್ಯಗಳ ಬಗ್ಗೆ ಪ್ರಸ್ತಾಪಿಸಿದ ಪ್ರಧಾನಿಯವರು ವನ್ಯಜೀವಿ ಸಂರಕ್ಷಣೆಯಲ್ಲಿ ಸಕ್ರಿಯ ಪಾತ್ರ ವಹಿಸಿರುವ ದೇಶದ ಬುಡಕಟ್ಟು ಜನರಿಗೆ ಕೃತಜ್ಞತೆ ಸಲ್ಲಿಸಿದರು. ವನ್ಯಜೀವಿ ಸಂರಕ್ಷಣೆಗಾಗಿ ಅನೇಕ ಸ್ಟಾರ್ಟ್‌ಅಪ್‌ಗಳು ತೆರೆದಿವೆ ಎಂದು ಅವರು ಹರ್ಷ ವ್ಯಕ್ತಪಡಿಸಿದರು. ಈ ವರ್ಷದ ಪರೀಕ್ಷಾ ಪೇ ಚರ್ಚಾ ಕಾರ್ಯಕ್ರಮವು ಹೊಸ ರೂಪದಲ್ಲಿ ಮೂಡಿ ಬಂದಿದ್ದು, ೮ ಸಂಚಿಕೆಗಳಲ್ಲಿ ತಜ್ಞರು ತಮ್ಮ ಸಲಹೆಗಳನ್ನು ನೀಡಿದ್ದು, ಈ ಸಂಚಿಕೆಗಳು ನಮೋ ಆಪ್‌ನಲ್ಲಿ ಲಭ್ಯವಿದೆ. ವಿದ್ಯಾರ್ಥಿಗಳು ಈ ಕಾರ್ಯಕ್ರಮ ಆಲಿಸಿ ಯಾವುದೇ ಒತ್ತಡವಿಲ್ಲದೇ ಸಕಾರಾತ್ಮಕ ಭಾವದಿಂದ ಪರೀಕ್ಷೆ ಬರೆಯುವಂತೆ ಶುಭ ಹಾರೈಸಿದರು.

<><><><>

ಮಹಿಳಾ ಶಾಂತಿ ಪಾಲಕರ ಪ್ರಪ್ರಥಮ ಸಮಾವೇಶ ನವದೆಹಲಿಯಲ್ಲಿ ನಾಳೆ ನಡೆಯಲಿದೆ. ಶಾಂತಿ ಪಾಲಿನೆಯಲ್ಲಿ ಮಹಿಳೆಯರು - ಜಾಗತಿಕ ದಕ್ಷಿಣದ ದೃಷ್ಟಿಕೋನ ಈ ಬಾರಿಯ ಧ್ಯೇಯವಾಕ್ಯವಾಗಿದೆ. ರಕ್ಷಣಾ ಸಚಿವಾಲಯ ಮತ್ತು ವಿಶ್ವಸಂಸ್ಥೆ, ಶಾಂತಿಪಾಲನಾ ಸಂಸ್ಥೆಯ ಸಹಯೋಗದಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಈ ಎರಡು ದಿನಗಳ ಸಮ್ಮೇಳನವನ್ನು ಆಯೋಜಿಸಿದೆ. ವಿಶ್ವಸಂಸ್ಥೆ ಶಾಂತಿ ಕಾರ್ಯಾಚರಣೆ ಇಲಾಖೆಯ ಅಧೀನ ಪ್ರಧಾನ ಕಾರ್ಯದರ್ಶಿ ಜೀನ್-ಪಿಯರೆ ಲ್ಯಾಕ್ರೋಯಿಕ್ಸ್ ಮತ್ತು ವಿಶ್ವಸಂಸ್ಥೆಯ ವಿಶೇಷ ಸಂಯೋಜಕ ಕ್ರಿಸ್ಟೈನ್ ಸೌಂಡರ್ಸ್ ವಿಶ್ವಸಂಸ್ಥೆಯನ್ನು ಪ್ರತಿನಿಧಿಸಲಿದ್ದಾರೆ. ಸಮ್ಮೇಳನದಲ್ಲಿ ಭಾಗವಹಿಸುವವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿಯಾಗಲಿದ್ದಾರೆ.

<><><><>

ರಾಷ್ಟ್ರೀಯ ಇ-ವಿಧಾನ್ ತಂತ್ರಾಂಶ (ಎನ್ ಇ ವಿ ಎ) ಯೋಜನೆಯಡಿ ಶಾಸಕರಿಗೆ ಕಂಪ್ಯೂಟರ್ ತರಬೇತಿ ಕಾರ್ಯಕ್ರಮಕ್ಕೆ ಪುದುಚೆರಿ ಮುಖ್ಯಮಂತ್ರಿ ಎನ್.ರಂಗಸ್ವಾಮಿ ಇಂದು ಚಾಲನೆ ನೀಡಿದ್ದಾರೆ. ಇದು ಶಾಸನಸಭೆಯನ್ನು ಕಾಗದರಹಿತ ಮಾಡುವ ನಿಟ್ಟಿನಲ್ಲಿ ಪ್ರಮುಖ ಹೆಜ್ಜೆಯಾಗಿದೆ. ಈ ಉಪಕ್ರಮಕ್ಕೆ ೮.೧೬ ಕೋಟಿ ರೂಪಾಯಿ ಅನುದಾನವನ್ನು ಕೇಂದ್ರ ಸರ್ಕಾರ ೨೦೨೨ ರಲ್ಲಿ ನೀಡಿದೆ.

<><><><>

ಕಾಶಿಯು ಭಾರತದ ಸಾಂಸ್ಕೃತಿಕ ಕೇಂದ್ರ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್ ಹೇಳಿದ್ದಾರೆ. ಕಾಶಿ ಮತ್ತು ತಮಿಳುನಾಡಿನ ನಡುವಿನ ಪ್ರಾಚೀನ ವಿಶೇಷ ಸಂಪರ್ಕದ ಸಂಭ್ರಮಾಚರಣೆಯೇ ಕಾಶಿ ತಮಿಳು ಸಂಗಮ ಎಂದು ಅವರು ಬಣ್ಣಿಸಿದ್ದಾರೆ. ವಾರಾಣಸಿಯಲ್ಲಿಂದು ಕಾಶಿ ತಮಿಳು ಸಂಗಮ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಭಾರತ ವಿವಿಧ

ಸಂಸ್ಕೃತಿಗಳ ವೈವಿಧ್ಯಮಯ ದೇಶವಾದರೂ ಏಕಭಾರತ ಶ್ರೇಷ್ಠ ಭಾರತದ ಭಾವವನ್ನು ಹೊಂದಿದೆ. ರಾಷ್ಟ್ರ ನಿರ್ಮಾಣದಲ್ಲಿ ಸಂಪ್ರದಾಯ ಮತ್ತು ತಂತ್ರಜ್ಞಾನ ಎರಡೂ ಮುಖ್ಯ. ಅನಕ್ಷರಸ್ಥರು ಕೂಡ ಸ್ಮಾರ್ಟ್ ಫೋನ್ ಬಳಸುತ್ತಿರುವುದು ಭಾರತೀಯರು ಆಧುನಿಕ ತಂತ್ರಜ್ಞಾನಕ್ಕೆ ಸುಲಭವಾಗಿ ಹೊಂದಿಕೊಳ್ಳುವರು ಎಂಬುದಕ್ಕೆ ಸಾಕ್ಷಿಯಾಗಿದೆ ಎಂದು ಅವರು ವಿವರಿಸಿದ್ದಾರೆ. ಕಾರ್ಯಕ್ರಮದಲ್ಲಿ ಅವರು ತಮಿಳು ಮತ್ತು ವಿದೇಶಿ ಪ್ರತಿನಿಧಿಗಳೊಂದಿಗೆ ಸಂವಾದ ನಡೆಸಿದರು. ವಿವಿಧ ದೇಶಗಳ ೪೫ ರಾಯಭಾರಿಗಳು ಬನಾರಸ್ ಹಿಂದೂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

<><><><>

ಸಾಮಾಜಿಕ ನ್ಯಾಯ ಕುರಿತಾದ ಎರಡು ದಿನಗಳ ಪ್ರಾದೇಶಿಕ ಸಂವಾದಕ್ಕೆ ಕೇಂದ್ರ ಕಾರ್ಮಿಕ ಸಚಿವ ಡಾ. ಮನ್ಸುಖ್ ಮಾಂಡವೀಯ ನವದೆಹಲಿಯಲ್ಲಿ ನಾಳೆ ಚಾಲನೆ ನೀಡಲಿದ್ದಾರೆ. ಸಾಮಾಜಿಕ ನ್ಯಾಯಕ್ಕಾಗಿ ಜಾಗತಿಕ ಒಕ್ಕೂಟ ಮತ್ತು ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ ಸಹಯೋಗದಲ್ಲಿ ಭಾರತ ಮೊಟ್ಟ ಮೊದಲ ಪ್ರಾದೇಶಿಕ ಸಂವಾದ ಕಾರ್ಯಕ್ರವನ್ನು ಏರ್ಪಡಿಸಿದೆ.

<><><><>

ಪಾಕಿಸ್ತಾನ ವಶಕ್ಕೆ ಪಡೆದಿದ್ದ ೨೨ ಭಾರತೀಯ ಮೀನುಗಾರರನ್ನು ಕಳೆದ ಸಂಜೆ ತವರಿಗೆ ವಾಪಸ್ ಕಳುಹಿಸಿದೆ. ೨೦೨೧-೨೨ ರಲ್ಲಿ ಅವರು ಅಜಾಗರೂಕತೆಯಿಂದ ಪಾಕ್ ಜಲಪ್ರದೇಶ ಪ್ರವೇಶಿಸಿದ್ದಾಗ ಅವರನ್ನು ಸೆರೆ ಹಿಡಿಯಲಾಗಿದೆ. ಶಿಕ್ಷೆಯ ಅವಧಿ ಪೂರ್ಣಗೊಂಡ ಬಳಿಕ ಅವರನ್ನು ವಾಪಸ್ ಕಳುಹಿಸಲಾಗಿದೆ. ಇವರ ಪೈಕಿ ೧೮ ಮೀನುಗಾರರು ಗುಜರಾತ್‌ಗೆ ಸೇರಿದವರಾಗಿದ್ದು, ಮೂವರು ಡಿಯು ಮತ್ತು ಓರ್ವ ವ್ಯಕ್ತಿ ಉತ್ತರಪ್ರದೇಶಕ್ಕೆ ಸೇರಿದವರಾಗಿದ್ದಾರೆ.

<><><><>

ದುಬೈನಲ್ಲಿ ನಡೆಯುತ್ತಿರುವ ಐಸಿಸಿ ಪುರುಷರ ಚಾಂಪಿಯನ್ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ಪಾಕಿಸ್ತಾನ ನೀಡಿರುವ ೨೪೨ ರನ್‌ಗಳ ಗುರಿ ಬೆನ್ನತ್ತಿರುವ ಭಾರತ ತಂಡ ಇತ್ತೀಚಿನ ವರದಿ ಬಂದಾಗ ೮.೪ ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ ೧ ವಿಕೆಟ್ ನಷ್ಟಕ್ಕೆ ೫೬ ರನ್ ಗಳಿಸಿ ಆಡುತ್ತಿದೆ. ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಪಾಕಿಸ್ತಾನ ನಿಗದಿತ ೫೦ ಓವರ್ ಪೂರ್ಣಗೊಳ್ಳಲು ಇನ್ನು ೨ ಎಸೆತ ಬಾಕಿಯಿರುವಂತೆಯೇ ತನ್ನೆಲ್ಲ ವಿಕೆಟ್ ಕಳೆದುಕೊಂಡು ೨೪೧ ರನ್ ಗಳಿಸಿದೆ.

<><><><>

ಮಹಾರಾಷ್ಟ್ರ ವಿಧಾನಮಂಡಲ ಅಧಿವೇಶನ ಮಾರ್ಚ್ ೩ ರಿಂದ ಮುಂದಿನ ತಿಂಗಳ ೨೬ರವರೆಗೆ ನಡೆಯಲಿದೆ. ಇಂದು ವಿಧಾನಸಭೆ ಮತ್ತು ವಿಧಾನಪರಿಷತ್‌ನ ಸಲಹಾ ಸಮಿತಿ ಸಭೆ ನಡೆಸಿದ್ದು, ಮಾರ್ಚ್ ೧೦ ರಂದು ರಾಜ್ಯ ಆಯವ್ಯಯ ಮಂಡನೆಯಾಗಲಿದೆ ಎಂದು ತಿಳಿಸಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>